**ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು**

**(ಕರ್ನಾಟಕ ಸರ್ಕಾರದ ಅಧೀನದ ಸ್ವಾಯತ್ತ ಸಂಸ್ಥೆ)**

**ವಿಕ್ಟೋರಿಯಾ ಆಸ್ಪತ್ರೆ ಆವರಣ, ಕೋಟೆ, ಬೆಂಗಳೂರು –560 002.**

ಸಂಖ್ಯೆ:ಸದಂಕಾಸಂಸಂ/ಸಿಬ್ಬಂದಿ/(1)/05/2014–15

ನಿರ್ದೇಶಕರು ಮತ್ತು ಡೀನ್ ರವರ ಕಾರ್ಯಾಲಯ,
ದಿನಾಂಕ: 25/11/15

## ಸೂಚನಾ ಪತ್ರ

ವಿಷಯ: ಡಾ: ಸಂದೀಪ್.ಆರ್. ಬಿನ್ ಡಿ.ಎನ್. ರುದ್ರ ನಾಯ್ಕ್, ಆದ ನೀವು ಈ ಸಂಸ್ಥೆಯ ದಂತ ಆರೋಗ್ಯಾಧಿಕಾರಿ ಹುದ್ದೆಗೆ ಆಯ್ಕೆಯಾಗಿರುವ ಬಗ್ಗೆ

ಉಲ್ಲೇಖ:– ಇದೇ ಸಮ ಸಂಖ್ಯೆ ಪತ್ರ ದಿನಾಂಕ:25.08.2015 ಮತ್ತು 20.10.2015

------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಡಾ: ಸಂದೀಪ್.ಆರ್. ಬಿನ್ ಡಿ.ಎನ್. ರುದ್ರ ನಾಯ್ಕ್, ಶ್ರೀ ಹಾಸನಾಂಬ ಡೆಂಟಲ್ ಕಾಲೇಜ್, ವಿದ್ಯಾನಗರ, ಹಾಸನ–573202 ಆದ ನೀವು ಸರ್ಕಾರಿ ದಂತ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಈ ಸಂಸ್ಥೆಯ ದಂತ ಆರೋಗ್ಯಾಧಿಕಾರಿ ಹುದ್ದೆಗೆ ಪರಿಶಿಷ್ಟ ಜಾತಿ ಮೀಸಲಾತಿಯಡಿ ಆಯ್ಕೆಯಾಗಿರುತ್ತೀರಿ. ತತ್ಸಂಬಂಧ ನಿಮ್ಮ ಜಾತಿ ಪರಿಶೀಲಿಸಿ ಸಿಂಧುತ್ವ ಪ್ರಮಾಣ ಪತ್ರ ನೀಡುವಂತೆ ಬೆಂಗಳೂರು ನಗರ ಜಿಲ್ಲಾಧಿಕಾರಿಗಳಿಗೆ ಉಲ್ಲೇಖಿತ ದಿನಾಂಕಗಳ ಪತ್ರಗಳಲ್ಲಿ ಕೋರಲಾಗಿತ್ತು. ಆದರೆ ಇದುವರೆವಿಗೂ ಯಾವುದೇ ಮಾಹಿತಿ ಈ ಸಂಸ್ಥೆಗೆ ದೊರಕಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸಂಸ್ಥೆಯ ದಂತ ಆರೋಗ್ಯಾಧಿಕಾರಿ ಹುದ್ದೆಯನ್ನು ಭರ್ತಿ ಮಾಡಲು ಸಾಧ್ಯವಾಗುತ್ತಿಲ್ಲ.

ಆದುದರಿಂದ ನೀವು ಈ ಸಂಸ್ಥೆಯ ದಂತ ಆರೋಗ್ಯಾಧಿಕಾರಿ ಹುದ್ದೆಗೆ ಸೇರಲು ಇಚ್ಚಿಸಿದಲ್ಲಿ ಕೂಡಲೇ ಸಿಂಧುತ್ವ ಪ್ರಮಾಣ ಪತ್ರ ಪಡೆದು ಕರ್ತವ್ಯಕ್ಕೆ ಹಾಜರಾಗುವುದು. ಇಚ್ಚೆಯಿಲ್ಲದಿದ್ದಲ್ಲಿ ಇಚ್ಚೆಯಿಲ್ಲದಿರುವ ಬಗ್ಗೆ ಸಂಸ್ಥೆಯ ನಿರ್ದೇಶಕರಿಗೆ ಲಿಖಿತವಾಗಿ ದಿನಾಂಕ:09.12.2015ರೊಳಗೆ ತಿಳಿಸುವುದು. ನಿಗದಿತ ದಿನಾಂಕದೊಳಗೆ ನಿಮ್ಮ ಲಿಖಿತ ಉತ್ತರ ಈ ಸಂಸ್ಥೆಗೆ ತಲುಪದೇ ಇದ್ದಲ್ಲಿ ನಿಮಗೆ ಈ ಸಂಸ್ಥೆಯ ದಂತ ಆರೋಗ್ಯಾಧಿಕಾರಿ ಹುದ್ದೆ ಇಚ್ಚೆಯಿಲ್ಲವೆಂದು ತಿಳಿದು ಹೆಚ್ಚುವರಿ ಪಟ್ಟಿಯಲ್ಲಿರುವ ಅಭ್ಯರ್ಥಿಯನ್ನು ನೀವು ಆಯ್ಕೆಯಾಗಿರುವ ದಂತ ಆರೋಗ್ಯಾಧಿಕಾರಿ ಹುದ್ದೆಗೆ ನೇಮಕ ಮಾಡಲಾಗುತ್ತದೆ. ನಂತರ ನಿಮ್ಮ ಯಾವುದೇ ಮನವಿಯನ್ನು ಪರಿಗಣಿಸಲಾಗುವುದಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ.

ಡೀನ್ ಮತ್ತು ನಿರ್ದೇಶಕರು,
ಸರ್ಕಾರಿ ದಂತ ಕಾಲೇಜು ಮತ್ತು
ಸಂಶೋಧನಾ ಸಂಸ್ಥೆ, ಬೆಂಗಳೂರು.

ಇವರಿಗೆ

ಡಾ: ಸಂದೀಪ್.ಆರ್. ಬಿನ್ ಡಿ.ಎನ್. ರುದ್ರ ನಾಯ್ಕ್,
ನಂ. 828, 1ನೇ ಮಹಡಿ, 2ನೇ ಹಂತ,
ವಿದ್ಯಾನಗರ ಹಾಸನ ಟೌನ್,
ಹಾಸನ.

Dispatch Clerk
Govt. Dental College and
Research Institute, Bangalore-02.
Date : 26/11/15